ಬಳ್ಳಾರಿಯ ಕ.ರಾ.ರ.ಸಾ. ಸಂಸ್ಥೆಯಲ್ಲಿ ಆದ ನಷ್ಟ

೨೪೪. ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭-೮೮ ಮತ್ತು ೧೯೮೮-೮೯ರಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಳ್ಳಾರಿ ವಿಭಾಗವು ಅನುಭವಿಸಿದ ನಷ್ಟ ಎಷ್ಟು ಮತ್ತು ಅಷ್ಟು ಹೆಚ್ಚಾಗಿ ನಷ್ಟವಾಗಲು ಕಾರಣವೇನು?

ಆ) ಬಳ್ಳಾರಿ ನಿಲ್ದಾಣದಲ್ಲಿ ಮಳಿಗೆ ಸಂಖ್ಯೆ ೫೨ನ್ನು ಎರಡು ವರ್ಷಗಳಿಂದ ಖಾಲಿಯಾಗಿ ಇಟ್ಟಿರುವ ವಿಷಯವು ನಿಜವಲ್ಲವೇ?

ಇ) ಈ ಮಳಿಗೆಯನ್ನು ಖಾಲಿ ಇಡುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹೊಂದಿದ ಆದಾಯದ ನಷ್ಟವೆಷ್ಟು? ಈ ತಪ್ಪಿಗಾಗಿ ಸರ್ಕಾರವು ಸಂಬಂಧಪಟ್ಟವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮಂತ್ರಿ ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು)—

ಅ) ೧೯೮೭-೮೮ರಲ್ಲಿ ರೂ. ೪೨.೦೫ ಲಕ್ಷ

೧೯೮೮-೮೯ರಲ್ಲಿ ರೂ. ೭೨.೧೦ ಲಕ್ಷ.

ಬಿಡಿ ಬಾಗಗಳು, ಟೈರುಗಳು ಟ್ಯೂಬುಗಳು ಮತ್ತು ಇತರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ವಾಹನ ತೆರಿಗೆ, ಸಿಬ್ಬಂದಿ ವೆಚ್ಚದಲ್ಲಿ ಆದ ಹೆಚ್ಚಳ ಇವೇ ಮೊದಲಾದವು ಈ ನಷ್ಟಕ್ಕೆ ಕಾರಣವಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಲಿಖಿತ ಮೂಲಕ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಹಿನೇ ಪಟ್ಟಿಯಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಇಡುತ್ತೇನೆ,

ಮಾರಾಟ ತೆರಿಗೆ ಬಾಬಿನಲ್ಲಿ ರಾಜ್ಯ ಸರ್ಕಾರಕ್ಕೆ ಬರಬೇಕಾದ ಬಾಕಿ

೨೦೫. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಆರ್ಥಿಕ ಸಾಂಖ್ಯಿಕ, ಹಣಕಾಸು ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರಕ್ಕೆ ೩೦ ಸೆಪ್ಟೆಂಬರ್ ೧೯೮೯ರವರೆಗೆ ಮಾರಾಟ ತೆರಿಗೆ ಬಾಬಿನಲ್ಲಿ ಬರ ಬೇಕಾದ ಬಾಕಿಯ ಒಟ್ಟು ಮೊತ್ತವೆಷ್ಟು ?

ಆ) ರೂ. ೫ ಲಕ್ಷಕ್ಕೂ ಅಧಿಕ ಬಾಕಿ ಹೊಂದಿರುವ ಬಾಕಿದಾರರು ಯಾರು ?

ಇ) ಈ ಬಾಕಿಯ ವಸೂಲಿಗಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಸಚಿವರು).—

ಅ) ರೂ. ೧೯೬.೧೩ ಕೋಟಿ (ದಿನಾಂಕ ೩೦-೯-೮೯ ರಂದು)

ಆ) ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು ವಿವರಗಳನ್ನು ಶೀಘ್ರದಲ್ಲಿ ಒದಗಿಸಲಾಗುವುದು,

ಇ) ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.